

ಒಂದು ಲಕ್ಷ ಲೀಟರಿನ ಟಾಂಕಿ. ನರ್ಸರಿ ಗಿಡ ಉತ್ಪಾದನೆಗೆ ಇದರದ್ದೇ ನೀರು.

# ಬಾನಿಗೆ ಆಲಿಕೆ ಬದುಕಲ್ಲಿ ನೆಮ್ಮದಿ

**ಕೇರಳದ ಜಾರ್ಜ್ ಕುಡುಂತಾನಂಕುಳಿಯಿಲ್ ಅವರ ಹೆಸರಿನಲ್ಲೇ ಒಂದು ಬಗೆಯ ನಾದವಿದೆ. ಆ ನಾದದ ಗುಂಗು ಅವರ ತೋಟದಲ್ಲಿ ಸದಾಕಾಲ ನೀರಿನ ರೂಪದಲ್ಲಿ ಅನುರಣಿಸುತ್ತಿರುವಂತಿದೆ. ಹಿಂದೊಮ್ಮೆ ಬದುಕಿನಲ್ಲಿ ಸೋತೆ ಎಂದು ಕೈಚೆಲ್ಲಿದ್ದ ಈ ಮಲಯಾಳಿ ಕೃಷಿಕ, 'ಮಳೆನೀರಿನ ಮಂತ್ರ' ನೆಚ್ಚಿದ ನಂತರ ಪವಾಡವನ್ನೇ ಸಾಧಿಸಿದ್ದಾರೆ. ತೋಟದ ಉತ್ಪನ್ನಗಳೊಂದಿಗೆ ಮೀನು–ಕವುಜಗ ಸಾಕಣೆಯೂ ಅವರ ಕೈಹಿಡಿದಿದೆ. 'ನಂಬಿ ಕೆಟ್ಟವರಿಲ್ಲವೋ ಮಣ್ಣನ್ನು' ಎನ್ನುವ ಮಾತು, ಜಾರ್ಜ್ ಅವರ ಪಾಲಿಗೆ – 'ನಂಬಿ ಕೆಟ್ಟವರಿಲ್ಲವೋ ಮಳೆನೀರನ್ನು' ಎನ್ನುವಂತಾಗಿದೆ.**

■ ಶ್ರೀ ಪಡ್ರೆ

ಕೃಷಿಕ ಜಾರ್ಜ್ ಕುಡುಂತಾನಂಕುಳಿಯಿಲ್ (70) ತಲೆಗೆ ಕೈ ಹೊತ್ತು ಕುಳಿತಿದ್ದರು. ಮೂರು ವರ್ಷ ಚೆನ್ನಾಗಿ ನೀರು ಕೊಟ್ಟ ಅವರ ಕೊಳವೆಬಾವಿ ಒಣಗಿತ್ತು. ಅಡಿಕೆ ಮರಗಳ ಸೋಗೆಗಳು ಕರಟಿದ್ದವು. ಬಹು ನಿರೀಕ್ಷೆಯೊಂದಿಗೆ ನೆಟ್ಟ ಸಾವಿರ ವೆನಿಲ್ಲಾ ಬಳ್ಳಿ ಬಾಡತೊಡಗಿತ್ತು. ಹನ್ನೆರಡು ವರ್ಷಗಳ ಹಿಂದಿನ ಕತೆ ಇದು.

'ನೀರು ಪಡೆಯಲು ದಾರಿ ತೋರಿಸಿ' ಎಂದು ಕೃಷಿ ಇಲಾಖೆಗೆ ಹೋದರು. ಅವರು 'ನಾವೇನು ಹೇಳೋಣ' ಎನ್ನುತ್ತಾ ಕೈ ಚೆಲ್ಲಿದರು. 'ಆದರೂ, ಸೋತೆ, ಬದುಕಿನ ಮಾರ್ಗ ಮುಚ್ಚಿತು ಎನ್ನುವ ವಿಷಣ್ಣಭಾವ ಮೂಡಿರಲಿಲ್ಲ' ಎಂದು ಈಗ ನೆನೆಯುತ್ತಾರೆ. 'ಏನೋ ದಾರಿ ಹೊಳೆಯಬಹುದು ಎಂದೂ ಅನಿಸಿರಲಿಲ್ಲ. ನಾವು ಭತ್ತ, ಮರಗೆಣಸು, ಇನ್ಯಾವುದೇ ಬೆಳೆ ಬೆಳೆದರೆ ಅದನ್ನು ಕಾಡುಪ್ರಾಣಿ ತಿನ್ನಬಹುದು, ಪ್ರಕೃತಿಯ ವೈಪರೀತ್ಯದಿಂದ ನಾಶ ಆಗಬಹುದು. ಕೊಯ್ದು ಮನೆ ತಲುಪಿದರಷ್ಟೇ ಅದು ನಮ್ಮದು. ನಾನು ಪ್ರಯತ್ನಪಟ್ಟೆ, ಆದರೆ, ದೈವ ಕೊಡಲಿಲ್ಲ ಎಂದುಕೊಂಡಿದ್ದೆ.'

ನೀರಿನ ತೀವ್ರ ಕೊರತೆಯಾದರೂ ಇವರಿಗೆ ಅದೃಷ್ಟ